Generated by Foxit PDF Creator © Foxit Software
http://www.foxitsoftware.com For evaluation only.

ಈ ವಸತಿ ಶಾಲೆಗಳಲ್ಲಿನ ಕೆಳಕಂಡ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತದೆ.

(1) ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ. 650/- ರ ದರದಲ್ಲಿ ಊಟದ ವ್ಯವಸ್ಥೆ.

(2) ಉಚಿತ ವಸತಿ.

(3) ರೂ. 800/- ರಲ್ಲಿ ಸಮವಸ್ತ್ರ, ಬೂಟು, ಕಾಲುಚೀಲ.

(4) ರೂ. 500/- ರಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ.

(5) ರೂ.100/- ರಲ್ಲಿ ಇತರೆ ವೆಚ್ಚಗಳು (ಟೂಥ್‌ಪೇಸ್ಟ್, ಸೋಪ್, ಬ್ರಷ್, ಎಣ್ಣೆ)

(6) ವೈದ್ಯಕೀಯ ಸೌಲಭ್ಯ ಹಾಸಿಗೆ, ಹೊದಿಕೆ, ಟ್ರಂಕ್, ಮಂಚ, ಪ್ರಯೋಗ ಶಾಲೆ ಉಪಕರಣ, ಭೋಧನಾ ಸಲಕರಣೆ, ಕ್ರೀಡಾ ಸಾಮಗ್ರಿ, ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಲಾಗುವುದು.

ಈ ವಸತಿ ಶಾಲೆಗಳಲ್ಲಿ ಪ್ರವೇಶ ನೀಡುವ ಮೊದಲು ಈ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಸುವುದು ಅವಶ್ಯಕವಾಗಿರುತ್ತದೆ.

(1) ಈ ವಸತಿ ಶಾಲೆಗಳನ್ನು ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆ ಎಂಬುದಾಗಿ ಕರೆಯಲಾಗುತ್ತದೆ.

(2) ಈ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ರಾಜ್ಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ಈ ಸಮುದಾಯಕ್ಕೆ ಸೇರಿರಬೇಕು.

(3) ಈ ಶಾಲೆಯನ್ನು 6 ರಿಂದ 10 ನೇ ತರಗತಿಯವರೆಗೆ ನಡೆಸಲಾಗುವುದು. ಪ್ರತಿ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ 50 ಆಗಿರುತ್ತದೆ. 6 ನೇ ತರಗತಿಗೆ ಸೇರ ಬಯಸುವ ಅಭ್ಯರ್ಥಿಗಳು ಸರ್ಕಾರದ ಅಥವಾ ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

(4) ಈ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ಜಿಲ್ಲೆಯ ಜಿಲ್ಲಾ ಉಪ ನಿರ್ದೇಶಕರು ಶಿಕ್ಷಣ ಇಲಾಖೆ ಇವರ ಮೇಲ್ವಿಚಾರಣೆಯಲ್ಲಿ ಪ್ರವೇಶ ಕೊಡಬೇಕು.

(5) ಪ್ರವೇಶ ಪರೀಕ್ಷೆಯನ್ನು ಕನ್ನಡ ಭಾಷೆ, ಗಣಿತ, ತ್ವರಿತ ಬರವಣಿಗೆ,ಸಾಮಾನ್ಯ ಜ್ಞಾನಗಳ ಮೇಲೆ ನಡೆಸಿ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗಳ ಮೂಲಕ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಕೊಡಬೇಕು.

(6) ಈ ಶಾಲೆಗಳು ಸರ್ಕಾರಿ ಶಾಲೆಗಳಾಗಿದ್ದು ಈ ಶಾಲೆಗಳಲ್ಲಿ ಭೋದಿಸುವ ಮಾಧ್ಯಮವು ಕನ್ನಡ/ಆಂಗ್ಲ ಆಗಿರುತ್ತದೆ. ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ನಮೂದಿಸಿರುವ ಪಠ್ಯ ಕ್ರಮದಂತೆಯೇ ಈ ವಸತಿ ಶಾಲೆಗಳಲ್ಲಿಯೂ ಸಿಲಬಸ್ ಇರುತ್ತದೆ.

(7) ಈ ವಸತಿ ಶಾಲೆಗಳಿಗೆ ಪ್ರವೇಶ ನೀಡುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 15000/- ಕ್ಕೆ ಮೀರಿರಬಾರದು. ಪ್ರವರ್ಗ 1 ರ ಅಭ್ಯರ್ಥಿಗಳಿಗೆ ವಾರ್ಷಿಕ ಆದಾಯದ ಮಿತಿ ಇರುವುದಿಲ್ಲ. ಶೇ.75 ರಷ್ಟು ಸ್ಥಾನಗಳನ್ನು (ಮುಸ್ಲಿಂ-77%, ಕ್ರಿಶ್ಚಿಯನ್-14%, ಜೈನ್-6% ಸಿಖ್-1%, ಬೌದ್ಧ-2%) ಅಲ್ಪಸಂಖ್ಯಾತರಿಗೆ ನೀಡಬೇಕು. ಅಲ್ಪಸಂಖ್ಯಾತರ ಸಮುದಾಯ ನಿರ್ದಿಷ್ಟ ಸಮುದಾಯದ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದು. ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ನೀಡತಕ್ಕದ್ದು.

(8) ಈ ವಸತಿ ಶಾಲೆ ಇರುವ ಕಂದಾಯ ವಿಭಾಗದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು.

Generated by Foxit PDF Creator © Foxit Software
http://www.foxitsoftware.com For evaluation only.

(9) ಈ ವಸತಿ ಶಾಲೆಗಳು ಜೂನ್ 1 ರಿಂದ ಪ್ರಾರಂಭಿಸಿ ವಾರ್ಷಿಕ ಪರೀಕ್ಷೆಗಳು ಮುಗಿಯುವವರೆಗೂ ನಡೆಯುತ್ತವೆ.

(10) ಈ ವಸತಿ ಶಾಲೆಗಳಲ್ಲಿ ಅಭ್ಯರ್ಥಿಗಳು ಅನುತ್ತೀರ್ಣರಾದಲ್ಲಿ ಒಂದು ಶೈಕ್ಷಣಿಕ ಅವಧಿಗೆ ಮಾತ್ರ ಮುಂದುವರೆಸಬಹುದು.

(11) ಈ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಯು ಮೆರಿಟ್ ವಿದ್ಯಾರ್ಥಿವೇತನ ಹೊರತುಪಡಿಸಿ ಬೇರೆ ಯಾವುದೇ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹವಿರುವುದಿಲ್ಲ.

(12) ಶೇ. 80% ರಷ್ಟು ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಗೆ ನೀಡಬೇಕು.

(13) ಈ ವಸತಿ ಶಾಲೆಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಿಂದ ಸರ್ಕಾರಿ/ಅಂಗೀಕೃತ ಶಾಲೆಗೆ ಸೇರಿದ ವಿದ್ಯಾರ್ಥಿಗಳೆಂದು ಧೃಡೀಕರನ ಪತ್ರ, ವಯಸ್ಸಿನ ಪ್ರಮಾಣ ಪತ್ರ ಹಾಗೂ ತಹಶೀಲ್ದಾರ್‌ರವರಿಂದ ಪಡೆದ ಜಾತಿ/ಆದಾಯ ಪ್ರಮಾಣ ಪತ್ರಗಳೊಂದಿಗೆ ಸಲ್ಲಿಸಬೇಕು.

<u>ವಸತಿ ಶಾಲೆಗೆ ಪ್ರವೇಶ ನೀಡುವುದಕ್ಕೆ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನೊಳಗೊಂಡ ಆಯ್ಕೆ ಸಮಿತಿ ಇರುತ್ತದೆ.</u>

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಸದಸ್ಯರು |
| 3 | ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು | ಸದಸ್ಯರು |
| 4 | ವಸತಿ ಶಾಲೆ ಇರುವ ಕ್ಷೇತ್ರದ ವಿಧಾನಸಭೆಯ/ವಿಧಾನಪರಿಷತ್ ಸದಸ್ಯರು | ಸದಸ್ಯರು |
| 5 | ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

**<u>ವೇಳಾಪಟ್ಟಿ:</u>**

| | | |
|---|---|---|
| 1 | ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವ ಪ್ರಕಟಣೆ ಹೊರಡಿಸುವ ದಿನಾಂಕ | ಏಪ್ರಿಲ್–15 |
| 2 | ಅರ್ಜಿ ಸಲ್ಲಿಸಲು ನಿಗದಿಪಡಿಸುವ ಕಡೆಯ ದಿನಾಂಕ | ಮೇ–15 |
| 3 | ಅರ್ಜಿಗಳ ಪರಿಶೀಲನೆ ಮಾಡಿ ಲಿಖಿತ ಪರೀಕ್ಷೆ ನಡೆಸುವ ದಿನಾಂಕ | ಮೇ–20 |
| 4 | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಮೌಖಿಕ ಪರೀಕ್ಷೆ ನಡೆಸುವ ದಿನಾಂಕ | ಮೇ–25 |
| 5 | ಆಯ್ಕೆ ಪಟ್ಟಿ ಪ್ರಕಟಿಸುವುದು. | ಮೇ–27 |
| 6 | ವಸತಿ ಶಾಲೆಯನ್ನು ಪ್ರಾರಂಭಿಸುವುದು | ಜೂನ್–1 |

| | | |
|---|---|---|
| 2 | ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಜುಲೈ–25 |
| 3 | ಅರ್ಜಿಗಳ ಪರಿಶೀಲನೆ ಹಾಗೂ ಆಯ್ಕೆ | ಆಗಸ್ಟ್–01 |
| 4 | ತರಬೇತಿಗೆ ನಿಯೋಜನೆ | ಆಗಸ್ಟ್–10 |
| 5 | ತರಬೇತಿ ಪ್ರಾರಂಭ | ಆಗಸ್ಟ್–20 |